

ಪ್ರಕಾರದ ಸಂಗೀತವನ್ನು ಈ ಬ್ಯಾಂಡ್‌ನವರು ಮಿಶ್ರಣ ಮಾಡಿ ಹಾಡುಗಳನ್ನು ಮಾಡುತ್ತಾರೆ. ಎಲೆಕ್ಟ್ರಿಕ್ ವಾದ್ಯಗಳ ಬಳಕೆಯೇ ಹೆಚ್ಚು.

'ಅಡೋರಬಲ್ ರೆಪ್ರೆಸೆಂಟಿಟಿವ್ ಎಂಸಿ ಫಾರ್ ಯೂತ್' (ARMY) ಎಂಬ ಹೆಸರಿನಲ್ಲಿ ಬಿಟಿಎಸ್ ಅಭಿಮಾನಿಗಳು ಗುರುತಿಸಿಕೊಳ್ಳುತ್ತಾರೆ. ಈ ಬ್ಯಾಂಡ್‌ನ ಯುವಕರನ್ನು ಗೇಲಿ ಮಾಡುವುದು, ಟ್ರೋಲ್ ಮಾಡುವುದು ಕೂಡ ವ್ಯಾಪಕವಾಗಿ ನಡೆದಿದೆ. ಹೆಣ್ಣುಮಕ್ಕಳಿಗೆ ಇವರ ಪೋರ್ಸೆಲಿನ್‌ನಂತಹ ಚರ್ಮ ಬಲು ಇಷ್ಟ. ಫಳಫಳ ಹೊಳೆಯುವ ಮುಖದ ಮೇಲೆ ಹುಡುಕಿದರೂ ಒಂದು ಕೂದಲು ಕಾಣದು. 'ಕೆಜಿಎಫ್' ಹೀರೊ ಯಶ್ ಪೊಗದಸ್ತು ಗಡ್ಡ ಬೆಳೆಸಿ, ಗಂಡು ಸಂಕೇತ ತಾನೆಂಬಂತೆ ಬದುಕುತ್ತಿರುವಾಗ, 'ಚಿಳ್ಳೆಪಿಳ್ಳೆ' ಎಂದುಕೊಂಡಿರುವ ಹೆಣ್ಣುಮಕ್ಕಳು ರೋಮವಿಲ್ಲದ ಈ ಬ್ಯಾಂಡ್‌ನವರನ್ನು ಕಂಡು 'ಮೋಹದ ಕೋಮಾ'ಗೆ ಒಳಗಾಗಿದ್ದು ಹೇಗೋ? ಈ ಬಗೆಗೂ ದೇಸಿಮಟ್ಟದಲ್ಲೂ ಚರ್ಚೆಗಳು ನಡೆಯುತ್ತಿವೆ.

ಟೆಸ್ಟೊಸ್ಟಿರಾನ್ ಹಾರ್ಮೋನ್‌ನಿಂದಾಗಿ ಯುವಕರಲ್ಲಿ ಸಾಮಾನ್ಯವಾಗಿ ಗಡ್ಡ–ಮೀಸೆ ಬರುವುದು ಸಹಜ. ಅಲ್ಲದೇ ವಕ್ಷದ ಭಾಗ ಯೌವನಾವಸ್ಥೆಯಲ್ಲಿ ಅಗಲವಾಗುತ್ತದೆ. ಬಿಟಿಎಸ್ ಹುಡುಗರು ಇದಕ್ಕೆ ತದ್ವಿರುದ್ಧ. ಅವರು ತೊಡುವ ಬಟ್ಟೆ ಹಾಗೂ ಹಚ್ಚುವ ಮೇಕಪ್ ಎಲ್ಲವೂ ಹೆಣ್ಣುಮಕ್ಕಳ ಅಲಂಕಾರಪ್ರಿಯತೆಯನ್ನು ನೆನಪಿಸುವಷ್ಟೇ ತೀವ್ರವಾಗಿದೆ. ಎಲ್ಲರಂತಿಲ್ಲದ ಅವರ ಇರುವಿಕೆಯೇ ಪ್ರೌಢಾವಸ್ಥೆಯ ಹೆಣ್ಣುಮಕ್ಕಳಿಗೆ ಇಷ್ಟವಾಗಿರಬೇಕು. ಪಡ್ಡೆ ಹುಡುಗರಲ್ಲಿ ಅನೇಕರು ಈ ಬ್ಯಾಂಡ್‌ನಲ್ಲಿರುವವರನ್ನು 'ಹೆಣ್ಣಪ್ಪಿಗಳು' ಎಂದು ಟ್ರೋಲ್ ಮಾಡಿರುವ ಅಸಂಖ್ಯ ಉದಾಹರಣೆಗಳಿವೆ.

ಜಿಸೂ, ಜೆನ್ನಿ, ರೋಸ್, ಲೀಸಾ – ಈ ಕೊರಿಯನ್ ಹೆಣ್ಣುಮಕ್ಕಳು ಸೇರಿ ರೂಪಿಸಿರುವ ಬ್ಯಾಂಡ್ 'ಬ್ಲ್ಯಾಕ್ ಪಿಂಕ್'. 'ಸ್ಟೇರ್ ಒನ್'


ಅದಿತಿ ಸಾಗರ್